ಸಾಕ್ಷಿಯನ್ನು ದಿನಾಂಕಃ 10-07-2018 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಕೆ.ಜೆ.ಎಂ. ವಕೀಲರಿಂದಃ

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಪ್ರಮಾಣೀಕರಿಸಿರುತ್ತಾರೆ.

ಸಾಕ್ಷಿ ಒಂದು ವಂಶವೃಕ್ಷವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, 1 ಮ್ಯುಟೇಷನನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, 2 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-3 ಮತ್ತು ನಿಪಿ-4 ಎಂದು, ಮ್ಯುಟೇಷನನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, ಮೂರು ಪಹಣಿಗಳನ್ನು ನಿಪಿ-6 ರಿಂದ ನಿಪಿ-8 ಎಂದು, ದಿ. 27.07.2017 ರ ಒಂದು ಧೃಢೀಕೃತ ಕ್ರಯಪತ್ರವನ್ನು ನಿಪಿ-9 ಎಂದು, 4 ಪಹಣಿಗಳನ್ನು ನಿಪಿ-10 ರಿಂದ ನಿಪಿ-13 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಇಲ್ಲಾ

ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓದಿ. ಹೇಳಿ. ಕೇಳಿ ಸರಿ ಇರುತ್ತದೆ.

ಸಿ.ಜೆ. ಮತ್ತು ಪ್ರ.ದ.ನ್ಯಾ.ದಂ.
ಕೊರಟಗೆರೆ

**ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಪ್ರಮಾಣೀಕರಿಸಿರುತ್ತಾರೆ.**

ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಕೊರಟಗೆರೆ
ಓಎಸ್ ನಂ.78/2007

| | | |
|---|---|---|
| ಹೆಸರು | : ಜಿ.ಡಿ.ದೇವರಾಜು | ಸಿಡಬ್ಲ್ಯೂ-1 |
| ತಂದೆ/ಗಂಡನ ಹೆಸರು | : ದೊಡ್ಡತಿಮ್ಮಯ್ಯ | ಪ್ರಮಾಣ ಮಾಡಿಸಲಾಯಿತು. |
| ವಯಸ್ಸು | : 37 — ವರ್ಷ | ದಿಃ 5/12/2015 |
| ವೃತ್ತಿ | : ವಕೀಲರು | |
| ವಾಸ ಸ್ಥಳ | : ಗಡ್ಡೋಬನಹಳ್ಳಿ | |

ಮು. ಮುಖ್ಯ ವಿಚಾರಣೆಃ- ನ್ಯಾಯಾಲಯದಿಂದ

ನ್ಯಾಯಾಲಯದಿಂದ ವಾರಂಟ್ ಜಾರಿ ಆದ ನಂತರ ಇಬ್ಬರು ಪಕ್ಷಕಾರರು ನೋಟೀಸ್ ನೀಡಿ ಸ್ಥಳಕ್ಕೆ ಬೇಟಿ ನೀಡಿರುತ್ತೇನೆ. ನಂತರ ನಾನು ಸ್ಥಳದಲ್ಲಿ ಅಳತೆ ಮಾಡಿ ನಕ್ಷೆ ತಯಾರು ಮಾಡಿ ಮಹಜರ್‌ನ್ನು ಬರೆದಿರುತ್ತೇನೆ. ಸ್ಥಳದ ವಸ್ತು ಸ್ಥಿತಿಯಂತೆ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪಕ್ಷಕಾರರ ಸೂಚನಾವಳಿಗೆ ಉತ್ತರವನ್ನು ನನ್ನ ವರದಿಯಲ್ಲಿ ನೀಡಿರುತ್ತೇನ್ನೆ ಒಂದು ಕಮಿಷನರ್ ವಾರಂಟ್‌ನ್ನು ಹಾಜರುಪಡಿಸಿದ್ದು ನಿ ಸಿ 1 ಎಂದು, ಸ್ಥಳ ಪಂಚನಾಮೆಯನ್ನು ನಿಸಿ 2 ಎಂದು ವರದಿಯನ್ನು ನಿಸಿ3 ಕಚ್ಚಾನಕ್ಷೆಯನ್ನು ನಿಸಿ 4 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಶ್ರೀ ಡಿ ಸಿ ಎಸ್ ವಕೀಲರಿಂದ.

ನಿಸಿ 4 ಕಚ್ಚಾನಕ್ಷೆಯಲ್ಲಿ ದಾವಾ ಐಟಂ ನಂ.2 ದಾವಾ ಐಟಂ ನಂ.1 ರ ದಕ್ಷಿಣಕ್ಕೆ ಬರುತ್ತದೆ ಎಂದು ತೋರಿಸಿರುತ್ತೇನೆ. ದಾವಾ ಐಟಂ ನಂ.2ನ್ನು ನಕ್ಷೆಯಎಲ್ಲಿ ಎಲ್ಲಿ ಬರುತ್ತದೆ ಎಂದು ತೋರಿಸಿರುವುದಿಲ್ಲ ಏಕೆಂದರೆ ವಾದಿಯು ತನ್ನಾ ಪಶ್ನಾವಳಿಯಲ್ಲಿ ಕೇಳಿರುವುದಿಲ್ಲ ಎಂದು ಹೇಳಿರುತ್ತಾರೆ. ಪ್ರತಿವಾದಿ ಮನೆಗಳ ಪಶ್ಚಿಮ ಭಾಗದಲ್ಲಿ ಯವ್ವುದಾದರೂ ದಾರಿ ಇದೆಂದ್ಯೂ ಎಂದರರೆ ಸಾಕ್ಷಿ ಅಲ್ಲಿ ಖಾಲಿ ಜಾಗ ಇರುತ್ತದೆ ಎಂದು ಹೇಳಿರುತ್ತಾರೆ. ಸದರಿ ಖಾಲಿ ಜಾಗ ಉತ್ತರ ದಿಕ್ಕಿನಲ್ಲಿ 5 ಅಡಿ 9 ಇಂಚು ಇರುತ್ತದೆ. ದಕ್ಷಿಣ ಕಡೆಗೆ ಖಾಲಿ ಜಾಗ ಅಗಲವಾಗುತ್ತಾ

ಹೋಗುತ್ತದೆ. ಸದರಿ ಖಾಲಿ ಜಾಗದ ಪ್ರಾರಂಬದಲ್ಲಿ ನಾಲ್ಕು ಚಕ್ರದ ವಾಹನಗಳು ಓಡಾಡಲು ಅಗುವುದಿಲ್ಲ. ದಾವಾ ಐಟಂ ನಂ 1 ರ ಉತ್ತರ ಬಾಗದಲ್ಲಿರುವ ಗೇಟ್ ಎಷ್ಟು ಹಳೆಯದು ಎಂದರೆ ಸಾಕ್ಷಿಯು ಅದಕ್ಕೆ ಬಣ್ಣ ಬಳಿದಿರುವುದದಿರಿಂದ ಹೇಳಲು ಅಗುವುದಿಲ್ಲ ಎಂದು ಹೇಳಿರುತ್ತಾರೆ. ಪ್ರತಿವಾದಿ ಮನೆಯ ಪೂರ್ವಕ್ಕೆ ಮೆಟ್ಟಿಲು ಹೊಸದಾಗಿ ಕಟ್ಟಿರುವುದು ಎಂದರೆ ಸಾಕ್ಷಿಯು ನನಗೆ ಎಷ್ಟು ವರ್ಷ ಅಗಿರುತ್ತದೆ ಎಂದು ಹೇಳಲು ಅಗುವುದಿಲ್ಲ ಅದರೆ ಹೊಸದಾಗಿ ಬಣ್ಣ ಬಳಿದಿರುತ್ತಾರೆ ಎಂದು ಹೇಳಿರುತ್ತಾರೆ. 1ನೇ ಪ್ರತಿವಾದಿ ಮನೆಯ ಪೂರ್ವಕ್ಕೆ 10 ಅಡಿ ಅಗಲದಲ್ಲಿ ಕಲ್ಲು ಬಂಡೆಯ ಹಾಸಿರುತ್ತಾರೆ ಎಂದರೆ ಸರಿ 1 ನೇ ಪ್ರತಿವಾದಿಯ ಮನೆಯ ದಕ್ಷಿಣಕ್ಕೆ ಯು ಆಕಾರದಲ್ಲಿ ಬಂಡೆಯನ್ನು ಖಾಲಿ ಜಾಗದಲ್ಲಿ ನಿಲ್ಲಸಿರುತ್ತಾರೆ. ಬಂಡೆ ನಿಲ್ಲಿಸಿರುವ ದಕ್ಷಿಣಕ್ಕೆ ಇರುವ ಖಾಲಿ ಜಾಗ ದಾವಾದಲ್ಲಿ ತೋರಿಸಿರುವ ನಕ್ಷೆಯಂತೆ ದಾವಾ ಐಟಂ ನಂ. 2 ಆಗಿರುತ್ತದೆ. ಅದರೆ ಅದು ವಾಸ್ತುವಾಗಿ ನನಗೆ ದಾವಾ ಐಟಂ ನಂ2 ರ ಜಾಗ ಎಂದು ಗೊತ್ತಿರುವುದಿಲ್ಲ ಖಾಲಿ ಜಾಗ ಆಗಿರುತ್ತದೆ. 2 ಮತ್ತು 3ನೇ ಪ್ರತಿವಾದಿ ಮನೆಯ ದಕ್ಷಿಣಕ್ಕೆ ದಾವಾ ಐಟಂ ನಂ.1 ಬರುತ್ತದೆ ಎಂದರೆ ಸಾಕ್ಷಿಯು ಒಂದು ರೂಮು ಬರುತ್ತದೆ ನಂತರ ಒಂದು ತೆಂಗಿನಮರ ಇರುತ್ತದೆ. ಸದರಿ ತೆಂಗಿನ ಮರದ ದಕ್ಷಿಣಕ್ಕೆ ದಾವಾ ಐಟಂ ನಂ.2 ಇರುತ್ತದೆ.

ಪಾಟೀ ಸವಾಲು ಶ್ರೀ ಬಿ ಎಲ್ಎನ್ ವಕಿಲರಿಂದಃ

ದಾವಾ ಸ್ಕೆಚ್‌ನಲ್ಲಿ ರೂಮ್ ಮತ್ತು ತೆಂಗಿನಮರವನ್ನು ತೋರಿಸಿರುವುದಿಲ್ಲ. ನಾನು ಮೇಲೆ ಹೇಳಿದ 5 ಅಡಿ 9 ಇಂಚು ಖಾಲ ಜಾಗದ ಉತ್ತರದ ಕಡೆಗೆ ಸರೋಜಮ್ಮನವರ ಮನೆ ಕ್ರಾಸ್ ಅಗಿರುತ್ತದೆ ಎಂದು ಹೇಳಿರುತ್ತಾರೆ. ಪ್ರತಿವಾದಿಗಳ ಮನೆಯ ಪಶ್ಚಿಮಕ್ಕೆ ಇರುವ ಖಾಲಿ ಜಾಗ ಯಾರಿಗೆ ಸೇರಿದೆ ಎಂಬುದರ ಬಗ್ಗೆ ನಾನು ದಾಖಲೆಯನ್ನು ಪರಶೀಲನೆ ಮಾಡಿರುವುದಿಲ್ಲ. ಮೇಲೆ 5 ಅಡಿ 9 ಇಂಚು ಜಾಗ ಸುವರ್ಣಮುಖಿ ನದಿಯವರಿಗೂ ಇರುವುದಿಲ್ಲ ಮದ್ಯದಲ್ಲಿ ಪ್ರಭಯ್ಯನವನರು ಬೇಲಿ ಹಾಕಿರುತ್ತಾರೆ ನಂತರ ತೋಟ ಇರುತ್ತದೆ ಎಂದು ಹೇಳಿರುತ್ತಾರೆ. ಸದರಿ ಬೇಲಿ ಮೊದಲಿನಿಂದಲೂ ಇರುತ್ತದೆ ಎಂದು ಹೇಳಿರುತ್ತಾರೆ. ಪ್ರಭಯ್ಯ ಮತ್ತು ಸರೋಜಮ್ಮನವರು ಮೇಲೆ ಹೇಳಿದ 5 ಅಡಿ 9 ಇಂಚು ಅಗಲದ ಜಾಗದ ಮುಂಖಾಂತರ ಹಾದುಹೋಗುತ್ತಾರೆ

ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ವಾದಿ ಮತ್ತು ಪ್ರತಿವಾದಿಗಳು ಮಾತ್ರ ಉಪಯೋಗಿಸಿರುತ್ತಾರೆ ಎಂದು ಹೇಳಿರುತ್ತಾರೆ. ಪ್ರಭಯ್ಯವನವರಿಗೆ ಹೋಗಲು ಬೇರೆ ಕಡೆ ದಾರಿ ಇರುತ್ತದೆ ಎಂದು ಗೊತ್ತಾಗಿರುತ್ತದೆ. '

ಮರು ವಿಚಾರಣೆ ಇರುವುದಿಲ:

ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.
ಓ.ಹೇ.ಕೇ.ಸರಿ ಇದೆ.

ಸಿ.ಜೆ.ಮತ್ತು ಪ್ರ.ದ.ನ್ಯಾ.ದಂ
ಕೊರಟಗೆರೆ

ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಕೊರಟಗೆರೆ
ಸಿ.ಸಿ. ನಂ. 41/1015

| | | |
|---|---|---|
| ಹೆಸರು | : ಸಾಕ್ಯಪ್ಪ | ಪಿಡಬ್ಲ್ಯೂ-5 ಸಿಡಬ್ಲ್ಯೂ-16 |
| ತಂದೆ ಹೆಸರು | : ಒದ್ದಿಗಪ್ಪ | ಪ್ರಮಾಣ ಮಾಡಿಸಲಾಯಿತು. |
| ವಯಸ್ಸು | :52 – ವರ್ಷ | ದಿ: 3/12/2015 |
| ವೃತ್ತಿ | :ಮುಖ್ಯ ಪೇದೆ 144 | |
| ವಾಸ ಸ್ಥಳ | : ಮಧುಗಿರಿ ಪೊಲೀಸ್ ಠಾಣಾ | |

ಮು. ಮುಖ್ಯ ವಿಚಾರಣೆ:- ಸ. ಸ. ವಕೀಲರು
8/4/2009 ರಿಂದ 11/5/2015 ರವರೆಗೆ ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ಹೆಚ್‌ಸಿ ಆಗಿ ಕರ್ತವ್ಯ ಮಾಡಿರುತ್ತೇನೆ.

ದಿ: 2/6/2014 ರಂದು ನಾನು ಹೊಳವನಹಳ್ಳಿ ಉಪಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಬೇಕಾದರೆ ಚಾ.ಸ-19 ರವರು ದೂರವಾಣಿ ಮುಖಾಂತರ ಅರಸಪುರದಲ್ಲಿ ಅಪಘಾತವಾಗಿದೆ ಸ್ಥಳಕ್ಕೆ ಬೇಟಿ ನೀಡುವಂತೆ ತಿಳಿಸಿದ್ದರ ಮೇರೆಗೆ ನಾನು ಚಾ.ಸ-15

ರವರು ಅರಸಪುರದ ಬಳಿ ಅಪಘಾತವಾದ ಸ್ಥಳಕ್ಕೆ ಹೋಗಿರುತ್ತೇವೆ. ನಂತರ ಮೃತನ ತಂದೆಯಾದ ಚಾ.ಸ-1 ರವರು ದೂರು ನೀಡಿದ್ದು, ಸದರಿ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಲು ಚಾ.ಸ-15 ರವರ ಮುಖಾಂತರ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ತಾನು ಪಡೆದುಕೊಂಡ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-6 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿ.ಪಿ-6(ಬಿ) ಎಂದು ಗುರುತಿಸಲಾಯಿತು. ಚಾ.ಸ-19 ರವರ ಆದೇಶದ ಮೇರೆಗೆ ನಾನು ಶವ ತನಿಖೆಯನ್ನು 2/6/2014 ರಂದು ಅರಸಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಂಭಾಗ ಚಾ.ಸ-8 ರಿಂದ 10 ರವರ ಸಮಕ್ಷಮ ಶವ ತನಿಖೆಯನ್ನು ನಿರ್ವಹಿಸಿರುತ್ತೇನೆ. ಶವ ತನಿಖೆಯಾದ ನಂತರ ಚಾ.ಸ-4 ರಿಂದ 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಶವ ಪರೀಕ್ಷೆಗಾಗಿ ಮೃತ ದೇಹವನ್ನು ಚಾ.ಸ-16 ರವರ ಮುಖಾಂತರ ಭೈರೇನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಕೃತ್ಯ ನೆಡೆದ ಸ್ಥಳದಲ್ಲಿ ನಾನು ನಿ.ಪಿ-7 ರಂತೆ ಪಂಚನಾಮೆಯನ್ನು ಮಾಡಿರುತ್ತೇನೆ. ಸಾಕ್ಷಿಯು ನಿ.ಪಿ-7ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-7(ಸಿ) ಎಂದು ಗುರುತಿಸಲಾಯಿತು. ನಂತರ ಅಪಘಾತಕ್ಕೆ ಒಳಗಾದ ಕೆಎ-02 ಇಎಲ್ 5563 ಟಿವಿಎಸ್ ದ್ವಿಚಕ್ರ ವಾಹನವನ್ನು ವಾಹನ ತಪಾಸಣೆಗಾಗಿ ನಮ್ಮ ವಶಕ್ಕೆ ಪಡೆದುಕೊಂಡಿರುತ್ತೇವೆ. ನಂತರ ಶವವನ್ನು ಅವರ ಸಂಬಂಧಿಕರಿಗೆ ಒಪ್ಪಿಸಿ ವರದಿಯನ್ನು ನೀಡಿರುತ್ತೇನೆ. ನಾನು ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರು ಮಾಡಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ- 8 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ-8(ಎ) ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಕಡತವನ್ನು ಚಾ.ಸ- 19 ರವರಿಗೆ ಮುಂದಿನ ತನಿಖೆಗಾಗಿ ನೀಡಿರುತ್ತೇನೆ.

ಪಾಟೀ ಸವಾಲು:- ಶ್ರೀ. ಬಿಕೆಎನ್ ವಕೀಲರಿಂದ

ನಾನು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಕಚ್ಚಾ ನಕ್ಷೆಯನ್ನು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಫಿರ್ಯಾದನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಠಾಣೆಯನ್ನು ಬನಾವಟು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.
ಓ.ಹೇ.ಕೇ.ಸರಿ ಇದೆ.

ಸಿ.ಜೆ.ಮತ್ತು ಪ್ರ.ದ.ನ್ಯಾ.ದಂ
ಕೊರಟಗೆರೆ

ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಕೊರಟಗೆರೆ

ಸಿ.ಸಿ. ನಂ.5 /1015

| | | |
|---|---|---|
| ಹೆಸರು | : ಡಿ.ನಾಗಲಿಂಗಚಾರ್ | ಪಿಡಬ್ಲ್ಯೂ-5 ಸಿಡಬ್ಲ್ಯೂ-5 |
| ತಂದೆ ಹೆಸರು | : ಲೇ ದೊಡ್ಡಲಿಂಗಚಾರ್ | ಪ್ರಮಾಣ ಮಾಡಿಸಲಾಯಿತು. |
| ವಯಸ್ಸು | : 54 – ವರ್ಷ | ದಿಃ 3/12/2015 |
| ವೃತ್ತಿ | : ಅಬಕಾರಿ ಉಪನಿರೀಕ್ಷಕರು | |
| ವಾಸ ಸ್ಥಳ | : ಮಧುಗಿರಿ ಉಪ ವಿಭಾಗ | |

ಮು. ಮುಖ್ಯ ವಿಚಾರಣೆಃ- ಸ. ಸ. ವಕೀಲರು

ದಿಃ 21/3/2015 ರಂದು ರಾತ್ರಿ 7.00 ಗಂಟೆಯ ಸಮಯದಲ್ಲಿ ಅಬಕಾರಿ ಉಪಧೀಕ್ಷಕರು, ನಾನು ಮತ್ತು ಕೊರಟಗೆರೆ ವಲಯ ಉಪನಿರೀಕ್ಷಕರು ಮತ್ತು ಸಿಬ್ಬಂಧಿಗಳು ಜಿ. ನಾಗೇನಹಳ್ಳಿ ಸರ್ಕಲ್ ಬಳಿ ಗಸ್ತು ಕಾರ್ಯ ನೆರವೇರಿಸುತ್ತಿರಬೇಕಾದರೆ ನಮಗೆ ಬಂದ ಖಚಿತ ಮಾಹಿತಿ ಮೇರೆಗೆ ನಾವು ಸೀಗೆಪಾಳ್ಯಕ್ಕೆ ಬೇಟಿ ನೀಡಿ ಅಲ್ಲಿ ಇದ್ದಂತಹ ಚಾ.ಸ-1 ಮತ್ತು 2 ರವರನ್ನು ಪಂಚರಾಗುವಂತೆ ಹೇಳಿ ಅವರನ್ನು ಆರೋಪಿಯ ಮನೆ ಬಳಿ ಕರೆದುಕೊಂಡು ಹೋದಾಗ ಆರೋಪಿಯ ಮನೆ ಬಾಗಿಲು ಬೀಗ ಹಾಕಿತ್ತು. ನಂತರ ಪಂಚರ ಸಮಕ್ಷಮದಲ್ಲಿ ಮನೆಯ ಸುತ್ತಾಮುತ್ತಾ ಪರಿಶೀಲನೆ ಮಾಡಿ ನೋಡಲಾಗಿ ಮನೆಯ ಪಶ್ಚಿಮ ದಿಕ್ಕಿನಲ್ಲಿ ಒಂದು ತೆಂಗಿನ ಗರಿಯಿಂದ ನಿರ್ಮಿಸಿರುವ ಬಚ್ಚಲು ಮನೆಯಲ್ಲಿ ತೆಂಗಿನ ಗರಿಯಿಂದ ಮುಚ್ಚಿದ್ದ ರಟ್ಟಿನ ಪೆಟ್ಟಿಗೆಗಳು ಕಂಡು ಬಂದಿದ್ದು ನಂತರ ಅವುಗಳನ್ನು ಸಿಬ್ಬಂಧಿಯ ಸಹಾಯದಿಂದ ಹೊರಗೆ ತೆಗದು ಅವುಗಳನ್ನು ಎಣಿಕೆ ಮಾಡಿ ನೋಡಲಾಗಿ ಅವುಗಳು 10 ರಟ್ಟಿನ ಪೆಟ್ಟಿಗೆಗಳು ಇದ್ದವು. ಅವುಗಳನ್ನು ತೆಗೆದು ನೋಡಲಾಗಿ ಅವುಗಳಲ್ಲಿ ಓಟಿ ವಿಸ್ಕಿ 48 ಟೆಟ್ರಾಪ್ಯಾಕೇಟ್‌ಗಳ 05 ರಟ್ಟಿನ ಪೆಟ್ಟಿಗಳು, ರಾಜಾ ವಿಸ್ಕೀ 48 ಟೆಟ್ರಾ ಪ್ಯಾಕೆಟ್‌ಗಳ 03 ರಟ್ಟಿನ ಪೆಟ್ಟಿಗಳು

ಹಾಗೂ ರಾಜಾ ವಿಸ್ಕಿ 96 ಪೌಚ್‌ಗಳಿರುವ 02 ರಟ್ಟಿನ ಪೆಟ್ಟಿಗಳು ಇದ್ದವು. ಅವುಗಳಲ್ಲಿಂದ ಒಟ್ಟು 86.400 ಲೀಟರ್‌ನ ಮದ್ಯ ಇರುವುದು ಕಂಡು ಬಂದಿರುತ್ತದೆ. ಒಂದೊಂದು ಪೆಟ್ಟಿಗಳಲಿಂದ ತಲಾ ಎರಡು ಟೆಟ್ರಾ ಪ್ಯಾಕೇಟ್‌ಗಳನ್ನು ತೆಗೆದು ಒಟ್ಟು 16 ಮಾದರಿ ಪಾಕೇಟ್‌ಗಳು ಹಾಗೂ ನಾಲ್ಕು ಪೌಚ್‌ಗಳನ್ನು ರಾಸಾಯಣಿಕ ಪರೀಕ್ಷೆಗಾಗಿ ಪ್ರತ್ಯೇಕ ಮಾಡಿ ಅವುಗಳನ್ನು ಬಟ್ಟೆ ಸುತ್ತಿ ಪಂಚರ ಸೀಲ್ ಪಡೆದು ಸೀಲ್ ಮಾಡಿರುತ್ತೇವೆ. ಸ್ಥಳದಲ್ಲಿ ಇದ್ದಂತಹ ಮಧ್ಯವನ್ನು ಇಲಾಖೆಯ ವಶಕ್ಕೆ ಪಡೆದುಕೊಂಡಿರುತ್ತೇನೆ. ಆ ಸಮಯದಲ್ಲಿ ಇಲ್ಲದೆ ಇದ್ದ ಕಾರಣ ಆರೋಪಿ ಯಾರು ಎಂದು ಹೇಳಿ ಗೊತ್ತಾಗಿರುವುದಿಲ್ಲ. ನಂತರ ನಿ.ಪಿ- 1 ರಂತೆ ಪಂಚನಾಮೆಯನ್ನು ನಮ್ಮ ವಾಹನದ ಹೆಡ್‌ಲೈಟ್‌ನ ಸಹಾಯದಿಂದ ಬರೆದಿರುತ್ತೇವೆ. ಸಾಕ್ಷಿಯು ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮಾದರಿ ಮಧ್ಯದ ಟೆಟ್ರಾಪ್ಯಾಕಟ್‌ಗಳು ಹಾಗೂ ಪೌಚಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು-ಮಾ-1 ರಿಂದ 20 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು:- ಶ್ರೀ. ಡಿಎಸ್ ವಕೀಲರಿಂದ

ನಮಗೆ ಆರೋಪಿಯ ಮನೆಯಒಳಗೆ ಮಧ್ಯವನ್ನು ಸಂಗ್ರಹ ಮಾಡಿರುತ್ತಾರೆ ಎಂದು ಹೇಳಿ ಮಾಹಿತಿ ಬಂದಿರುತ್ತದೆ. ಗರಿಯಿಂದ ನಿರ್ಮಿಸಿದ್ದ ಬಚ್ಚಲು ಮನೆ ಆರೋಪಿಗೆ ಸೇರಿದ್ದು ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ ಅದನ್ನು ತನಿಖಾಧಿಕಾರಿಗಳು ಮಾಡಿರುತ್ತಾರೆ. ನಿ.ಪಿ-1 ಪಂಚನಾಮೆಗೆ ಆರೋಪಿಯ ಮನೆಯ ಅಕ್ಕಪಕ್ಕದವರು ಯಾರು ಸಾಕ್ಷಿದಾರರಾಗಿ ಸಹಿಗಳನ್ನು ಮಾಡಿರುವುದಿಲ್ಲ. 2014ರ ಲೋಕಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಅಂಕಿಅಂಶಗಳಿಗೋಸ್ಕರ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಮಧ್ಯವನ್ನು ಸಂಗ್ರಹ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.
ಓ.ಹೇ.ಕೇ.ಸರಿ ಇದೆ.

ಸಿ.ಜೆ.ಮತ್ತು ಪ್ರ.ದ.ನ್ಯಾ.ದಂ
ಕೊರಟಗೆರೆ